# ಭಾರತೀಯ ಮಕ್ಕಳ ಸಾಂವಿಧಾನಿಕ ಹಕ್ಕುಗಳು






**ಎನ್. ವಿ. ವಾಸುದೇವ ಶರ್ಮಾ,** ಕಾರ್ಯಕಾರಿ ನಿರ್ದೇಶಕರು, 4606, 6ನೇ ಮಹಡಿ, ಹೈಪಾಯಿಂಟ್ 4, ಅರಮನೆ ರಸ್ತೆ, ಬೆಂಗಳೂರು, ದೂ. 080 22201098; 9448472513

ಮಕ್ಕಳ ಹಕ್ಕು, ಹಿತರಕ್ಷಣೆ ಮತ್ತು ಯೋಗಕ್ಷೇಮದ ಉದ್ದೇಶದೊಂದಿಗೆ ಜಗತ್ತಿನಾದ್ಯಂತ ಮಕ್ಕಳ ದಿನಾಚರಣೆಯನ್ನು ಬೇರೆ ಬೇರೆ ದಿನಾಂಕಗಳಂದು ಆಚರಿಸುತ್ತಿದ್ದಾರೆ. ಜಾಗತಿಕವಾಗಿ ನವೆಂಬರ್ 20ರಂದು ಹಾಗೂ ಭಾರತದಲ್ಲಿ ಜವಾಹರ್‌ಲಾಲ್ ನೆಹರುರವರ ಹುಟ್ಟುಹಬ್ಬ(ನವೆಂಬರ್ 14)ದಂದು ಆಚರಿಸಲಾಗುತ್ತದೆ. ಜಗತ್ತಿನ ಪ್ರತಿಯೊಂದು ಮಗುವನ್ನೂ ಘನತೆ ಮತ್ತು ಗೌರವದಿಂದ ನಡೆಸಿಕೊಂಡು ಅವರು ಸರ್ವಾಂಗೀಣ ಅಭಿವೃದ್ಧಿ ಹೊಂದಲು ಮತ್ತು ಸಮುದಾಯದ ಭಾಗವಾಗಲು ಅವಕಾಶ ನೀಡುವ ನಿಟ್ಟಿನಲ್ಲಿ ಈ ದಿನಾಚರಣೆಗಳು ಹೆಚ್ಚು ಮಹತ್ವ ಪಡೆದುಕೊಂಡಿವೆ. ಭಾರತೀಯ ಸಂವಿಧಾನವು ಪ್ರತಿಯೊಂದು ಮಗುವಿನ ವಾಸ ಸ್ಥಳ, ಜನಾಂಗ–ಸಾಮಾಜಿಕ ಮೂಲ, ಸಾಮರ್ಥ್ಯ, ಜನ್ಮ ಮತ್ತು ಇತರ ಸ್ಥಾನಮಾನವನ್ನು ಲೆಕ್ಕಿಸದೆ ಹಲವಾರು ಸೌಲಭ್ಯಗಳನ್ನು ಹಾಗೂ ಹಕ್ಕುಗಳನ್ನು ನೀಡಿದೆ. ಮಕ್ಕಳ ದಿನಾಚರಣೆ ಆಚರಿಸುತ್ತಿರುವ ಈ ಸಂದರ್ಭದಲ್ಲಿ ಭಾರತೀಯ ಮಕ್ಕಳಿಗೆ ಸಂವಿಧಾನ ದತ್ತವಾಗಿ ಬಂದಿರುವ ಹಕ್ಕುಗಳ ಬಗ್ಗೆ ಒಂದು ಕಿರು ಪರಿಚಯ ಮಾಡಿಕೊಳ್ಳೋಣ.

ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ 1989 ಜಾರಿಗೆ ಬರುವುದಕ್ಕೆ ನಾಲ್ಕು ದಶಕಗಳ ಮೊದಲೇ ಭಾರತ ಸಂವಿಧಾನ ದೇಶದ ಮಕ್ಕಳಿಗೆ 'ಪ್ರಜೆ' ಎನ್ನುವ ಗುರುತನ್ನು ನೀಡಿತ್ತು (ಪರಿಚ್ಛೇದ 5). ಮಕ್ಕಳನ್ನು ಪ್ರಜೆ ಎನ್ನುವ ಮೂಲಕ ಎಲ್ಲ ರೀತಿಯ ಹಕ್ಕುಗಳು ಮತ್ತು ಸಾಂವಿಧಾನಿಕ ರಕ್ಷಣೆಯನ್ನು ಮಕ್ಕಳಿಗೆ ಖಾತರಿಪಡಿಸಲಾಗಿದೆ. ಇದರೊಂದಿಗೆ ಮಕ್ಕಳಿಗೆ ವಿಶೇಷ ಸ್ಥಾನಮಾನ ಗಮನ ನೀಡಲೂ ಸಂವಿಧಾನ ಸ್ಪಷ್ಟಪಡಿಸಿರುವುದು, 'ಮಹಿಳೆಯರು ಮತ್ತು ಮಕ್ಕಳಿಗಾಗಿ ವಿಶೇಷ ಅವಕಾಶಗಳನ್ನು ಸೃಷ್ಟಿಸಲು ಸಂವಿಧಾನದ ಪರಿಚ್ಛೇದ 15 ಅಡ್ಡಬರಬಾರದು' (ಪರಿಚ್ಛೇದ 15.3). ಈ ತತ್ತ್ವವನ್ನು ಎತ್ತಿ ಹಿಡಿಯಲು ಬಹಳ ಮುಖ್ಯವಾಗಿ ಕೆಲವು ಪರಿಚ್ಛೇದಗಳಲ್ಲಿ ಸಂವಿಧಾನ ನೇರವಾಗಿ ಮಕ್ಕಳ ಪರವಾದ ದನಿ ಎತ್ತಿದೆ.

ಮೂಲಭೂತ ಹಕ್ಕುಗಳ ವಿಭಾಗದಲ್ಲಿ ನೇರವಾಗಿ ಮಕ್ಕಳನ್ನು ಕುರಿತು ಸಂವಿಧಾನ ವಿವರಿಸಿರುವ ಪರಿಚ್ಛೇದಗಳು : 6 ರಿಂದ 14 ವರ್ಷದೊಳಗಿನ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣದ ಹಕ್ಕು (ಪರಿಚ್ಛೇದ 21.ಎ) ಮತ್ತು ಮಕ್ಕಳನ್ನು ಅಪಾಯಕಾರಿ ಉದ್ದಿಮೆಗಳಲ್ಲಿ ಹಾಗೂ ಕ್ಷೇತ್ರಗಳಲ್ಲಿ ದುಡಿಸುವುದಕ್ಕೆ ನಿಷೇಧ ಹೇರಿದೆ (ಪರಿಚ್ಛೇದ 24).

ಭಾರತದ ಸರ್ವೋಚ್ಚ ನ್ಯಾಯಾಲಯ ತನ್ನೆದುರು ಬಂದ ಪ್ರಕರಣಗಳನ್ನು ಇತ್ಯರ್ಥ ಮಾಡುವಾಗ ಮಕ್ಕಳ ಹಕ್ಕುಗಳ ಬಲವರ್ಧನೆಗಾಗಿ ಕೆಲವು ನಿರ್ದೇಶನಗಳನ್ನು ನೀಡಿದೆ. [ಅದರ ಪರಿಣಾಮ ಸಂವಿಧಾನಕ್ಕೆ 86ನೇ ತಿದ್ದುಪಡಿಯಾಗಿ, ಪ್ರಾಥಮಿಕ ಶಿಕ್ಷಣದ ವಿಚಾರ, ಪರಿಚ್ಛೇದ 45ರಿಂದ ಕಳಚಿಕೊಂಡು, ಮಕ್ಕಳ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ ಎಂಬ ರೂಪ ಪಡೆದು ಮೂಲಭೂತ ಹಕ್ಕು ಆಗಿದೆ (ಪರಿಚ್ಛೇದ 21ಎ)].

ರಾಜ್ಯ ನಿರ್ದೇಶಕ ತತ್ತ್ವಗಳೂ ಕೂಡಾ ಮಕ್ಕಳ ಹಿತ ಕಾಪಾಡುವಲ್ಲಿ ಬಹಳ ಮುಖ್ಯ ಪಾತ್ರ ವಹಿಸಿದೆ. ರಾಜ್ಯ ನಿರ್ದೇಶಕ ತತ್ತ್ವಗಳಲ್ಲಿ ಮಕ್ಕಳನ್ನು ಕುರಿತು ಮೂರು ನೇರ ಉಲ್ಲೇಖಗಳನ್ನು ಕಾಣಬಹುದು: ಕೆಲಸಗಾರರ ಆರೋಗ್ಯ ಮತ್ತು ಶ್ರಮಶಕ್ತಿ ಹಾಗೂ ಚಿಕ್ಕ ಪುಟ್ಟ ವಯಸ್ಸಿನ ಮಕ್ಕಳನ್ನು ದುಡಿಯುವುದಕ್ಕೆ ದುರುಪಯೋಗ ಮಾಡಿಕೊಳ್ಳಬಾರದು ಮತ್ತು ಯಾವುದೇ ಪ್ರಜೆಯನ್ನು ಅವರ ಹಣ ಸಂಪಾದನೆಯ ತುರ್ತಿನಿಂದಾಗಿ ಅವರ ಆರೋಗ್ಯ, ಶಕ್ತಿ, ವಯಸ್ಸುಗಳಿಗೆ ಸೂಕ್ತವಲ್ಲದ ದುಡಿಮೆಗೆ ಬಲವಂತವಾಗಿ ಇಳಿಸದಂತೆ ರಕ್ಷಿಸಬೇಕು (ಪರಿಚ್ಛೇದ 39.ಇ). ಮಕ್ಕಳಿಗೆ ಆರೋಗ್ಯ ಪೂರ್ಣ, ಗೌರವಯುತವಾದ ಹಾಗೂ ಸ್ವತಂತ್ರವಾದ ವಾತಾವರಣದಲ್ಲಿ ಬೆಳೆಯಲು ಅವಕಾಶ ನಿರ್ಮಿಸಿ, ಮಕ್ಕಳು ಮತ್ತು ಯುವಜನರು ನೈತಿಕ ಅಥವಾ ಇನ್ನಿತರ ಅಧೋಗತಿಗೆ ಇಳಿಯದಂತೆ ರಕ್ಷಿಸುವುದು (ಪರಿಚ್ಛೇದ 39 ಎಫ್). ಮತ್ತು ಆರು ವರ್ಷ ದಾಟದ ಎಲ್ಲ ಮಕ್ಕಳಿಗೆ ಆರಂಭಿಕ ಬಾಲ್ಯದ ರಕ್ಷಣೆ ಹಾಗೂ ಶೈಕ್ಷಣಿಕ ವ್ಯವಸ್ಥೆಗಳನ್ನು ಮಾಡಲು ಸರ್ಕಾರ ಪ್ರಯತ್ನಪಡಬೇಕು (ಪರಿಚ್ಛೇದ 45). ಎಂದು ಹೇಳಿದೆ.



ಒಡಂಬಡಿಕೆಗೆ ಒಪ್ಪಿಕೊಂಡಿರುವ ಮತ್ತು ತನ್ನ ರಾಷ್ಟ್ರೀಯ ಮಕ್ಕಳ ನೀತಿ 2013ರಲ್ಲಿ ಸ್ಪಷ್ಟ ಪಡಿಸಿರುವಂತೆ ಭಾರತ ಮಕ್ಕಳೆಂದರೆ 18 ವರ್ಷದೊಳಗಿನವರು ಎಂದು ಹೇಳಿದ್ದರೂ, ಈಗಲೂ ಚಾಲ್ತಿಯಲ್ಲಿರುವ ಕೆಲವು ಕಾಯಿದೆಗಳಲ್ಲಿ ವಿಭಿನ್ನ ವ್ಯಾಖ್ಯಾನಗಳನ್ನು ಹೊಂದಿದೆ. 18ನೇ ವಯಸ್ಸಿನ ತನಕ ಮಗು. ಅದು ದಾಟಿದ ಮರುಕ್ಷಣದಿಂದ ಮಗುವಲ್ಲ! ಆನಂತರ ಮಕ್ಕಳಿಗೆ ಕೊಡಲೇ ಬೇಕಾದ ವಿಶೇಷ ರಕ್ಷಣೆಯ ವ್ಯಾಪ್ತಿಗೆ ಅವರು ಬರುವುದಿಲ್ಲ ಎಂದು ಕಡ್ಡಿ ತುಂಡು ಮಾಡಿ ಹೇಳುವುದು ಅಸಂಗತ. ಆದರೂ ಹಲವಾರು ಹಕ್ಕುಗಳನ್ನು ಮಕ್ಕಳಿಗೆ ಕೊಡಮಾಡಲು ಹಾಗೂ ರಕ್ಷಣೆಯೇ ಪ್ರಮುಖವಾದ ವಿಚಾರಗಳ ಹಿನ್ನೆಲೆಯಲ್ಲಿ ಮಗುವೆಂದರೆ ವಿಕಾಸ ಹೊಂದುತ್ತಿರುವ, ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುತ್ತಿರುವ ಜೀವಿ ಎಂಬರ್ಥದಲ್ಲಿ ಸರ್ಕಾರ, ಸಮಾಜ ಮತ್ತು ಕುಟುಂಬಗಳಿಗೆ ಕೆಲವು ಜವಾಬ್ದಾರಿ, ಕರ್ತವ್ಯಗಳನ್ನು ನಿಗದಿಪಡಿಸಲು ಈ ವಯಸ್ಸಿನ ಮಿತಿ ಅಗತ್ಯ.



ಇವುಗಳೊಂದಿಗೆ ಮಕ್ಕಳನ್ನು ಕುರಿತು ನೇರ ಉಲ್ಲೇಖ ಬರುವುದು ಮೂಲಭೂತ ಕರ್ತವ್ಯಗಳ ವಿಭಾಗದಲ್ಲಿ [ಪರಿಚ್ಛೇದ 51 ಎ (ಕೆ)]. ಅದು, 6ರಿಂದ 14 ವರ್ಷದೊಳಗಿನ ತಮ್ಮ ಮಕ್ಕಳಿಗೆ ಶಿಕ್ಷಣದ ಅವಕಾಶವನ್ನು ಪೋಷಕರು ಮಾಡಿಕೊಡಬೇಕು. ಇಷ್ಟಲ್ಲದೆ, ಮಕ್ಕಳನ್ನು ಭಾರತದ ಪ್ರಜೆಗಳೆಂದು ಸಂವಿಧಾನ ಗುರುತಿಸಿದ ಮೇಲೂ, ಮೂಲಭೂತ ಹಕ್ಕುಗಳ ಮುಖ್ಯ ವಿಚಾರಗಳನ್ನು ಮಕ್ಕಳಿಗೆ ಸಂಬಂಧಿಸಿದ್ದೇ ಎಂದು ಸ್ಪಷ್ಟವಾಗಿ ಜಾಹೀರುಗೊಳಿಸುವ ಅವಶ್ಯಕತೆ ಇದೆ. ಅದನ್ನು ಈ ಮುಂದಿನಂತೆ ಗುರುತಿಸಬಹುದು. [ಮಕ್ಕಳಿಗೆ] ಇತರೆಲ್ಲರೆದುರು ಸಮಾನವಾದ ಹಕ್ಕುಗಳಿವೆ (ಪ. 14); ಎಂತಹದೇ ರೀತಿಯ ತಾರತಮ್ಯದ ವಿರುದ್ಧ [ಮಕ್ಕಳಿಗೆ] ರಕ್ಷಣೆ (ಪ.15); [ಮಕ್ಕಳಿಗೆ] ವೈಯಕ್ತಿಕ ಸ್ವಾತಂತ್ರ್ಯ ಮತ್ತು ಜೀವಿಸುವ ಹಕ್ಕು (ಪ. 21); ಜೀತದಂತಹ ಬಲವಂತವಾಗಿ ದುಡಿಸಿಕೊಳ್ಳುವ ಹಾಗೂ ಸಾಗಣೆ, ಮಾರಾಟಕ್ಕೆ ಗುರಿಯಾಗುವುದರ ವಿರುದ್ಧ [ಮಕ್ಕಳಿಗೆ] ರಕ್ಷಣೆ ಪಡೆಯುವ ಹಕ್ಕು (ಪ. 23) ಮತ್ತು ಅಲ್ಪ ಸಂಖ್ಯಾತರ [ಮಕ್ಕಳ] ಹಿತಾಸಕ್ತಿಗಳ ರಕ್ಷಣೆ (ಪ. 29), ಇದರ ಜೊತೆ, ರಾಜ್ಯ ನಿರ್ದೇಶಕ ತತ್ತ್ವಗಳಲ್ಲೂ ಪರಿಚ್ಛೇದ 46 ವಿವರಿಸಿರುವಂತೆ, ಪರಿಶಿಷ್ಟ ಜಾತಿ ಮತ್ತು ವರ್ಗಗಳು ಹಾಗೂ ಇನ್ನಿತರ ಬಲಹೀನ ಗುಂಪುಗಳಿಗೆ ಸೇರಿದ [ಮಕ್ಕಳಿಗೆ] ಶೈಕ್ಷಣಿಕ ಮತ್ತು ಆರ್ಥಿಕ ನೆರವು ನೀಡಬೇಕು ಹಾಗೂ ಪರಿಚ್ಛೇದ 47ರಲ್ಲಿ ಹೇಳಿರುವಂತೆ, ಪ್ರಜೆಗಳಾದ [ಮಕ್ಕಳ] ಪೌಷ್ಠಿಕತೆಯ ಮಟ್ಟ, ಜೀವನ ಮಟ್ಟ ಮತ್ತು ಸಾರ್ವಜನಿಕ ಸ್ವಾಸ್ಥ್ಯವನ್ನು ಉತ್ತಮಗೊಳಿಸುವುದು ಸರ್ಕಾರದ ಕರ್ತವ್ಯ. ಈ ಎಲ್ಲವುದರಲ್ಲೂ ಸಂವಿಧಾನದ ಆಶಯ ಮಕ್ಕಳ ಹಿತ ಕಾಪಾಡುವುದೇ ಆಗಿದೆ.

### ಮಕ್ಕಳು ಮತ್ತು ಕಾನೂನುಗಳು

ಮಕ್ಕಳೆಂದರೆ ಹುಟ್ಟಿನಿಂದ ವಯಸ್ಕರಾಗುವ ತನಕ ಎಂಬುದು ಸರ್ವವಿಧಿತ. ವಯಸ್ಕರು ಎಂದರೆ ಭಾರತದಲ್ಲಿನ ಸಾಮಾನ್ಯ ಗ್ರಹಿಕೆ 18 ವರ್ಷ ದಾಟಿದವರು. ತಮ್ಮ ನಿರ್ಧಾರಗಳಿಗೆ ಮತ್ತು ಅದರ ಪರಿಣಾಮಗಳಿಗೆ ತಾವೇ ಜವಾಬ್ದಾರರು ಎಂಬ ಅರ್ಹತೆ ಪಡೆಯುವ ತನಕ (ಅಂದರೆ 18 ವರ್ಷವಾಗುವ ತನಕ) ಮಕ್ಕಳು ಎಂದೂ ಹೇಳಬಹುದು. ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ

ಮಕ್ಕಳ ರಕ್ಷಣೆಗೆ ಸಂಬಂಧಪಟ್ಟ ಕೆಲವು ಮೂಲಭೂತ ವಿಚಾರಗಳಿಗೆ ಮಕ್ಕಳ ಹಕ್ಕುಗಳ ಒಡಂಬಡಿಕೆ ನಿರ್ದಿಷ್ಟ ನಿಲುವುಗಳನ್ನು ತೆಗೆದುಕೊಂಡಿದೆ. ಇವುಗಳನ್ನು ಒಡಂಬಡಿಕೆ ಒಪ್ಪಿರುವ ದೇಶಗಳು ಪಾಲಿಸಬೇಕೆಂದೂ ಹೇಳಲಾಗಿದೆ. ಅವು, 18 ವರ್ಷದೊಳಗಿನ ಮಕ್ಕಳಿಗೆ ಮರಣದಂಡನೆ ವಿಧಿಸಬಾರದು (ಪರಿಚ್ಛೇದ 37), 15 ವರ್ಷದೊಳಗಿನವರನ್ನು ಸೈನ್ಯಕ್ಕೆ ಸೇರಿಸಿಕೊಳ್ಳಬಾರದು ಮತ್ತು ಯಾವುದೇ ಸಶಸ್ತ್ರ ಸಂಘರ್ಷಕ್ಕಿಳಿಸಬಾರದು (ಪರಿಚ್ಛೇದ 38), ಉದ್ಯೋಗಕ್ಕೆ ಸೇರಿಸಿಕೊಳ್ಳಲು ಸರ್ಕಾರಗಳು ನಿರ್ದಿಷ್ಟ ವಯೋಮಿತಿ ಹೊಂದಿರಬೇಕು (ಪರಿಚ್ಛೇದ 32), ಅಪರಾಧದ ಜವಾಬ್ದಾರಿ ಹೊರಿಸಲು ವಯಸ್ಸು ನಿಗದಿಪಡಿಸಬೇಕು (ಪರಿಚ್ಛೇದ 40) ಹಾಗೆಯೇ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ ನಿರ್ದಿಷ್ಟ ವಯಸ್ಸಿನ ತನಕ ನೀಡಲೇಬೇಕು ಎಂದು ಸೂಚಿಸಲು (ಪರಿಚ್ಛೇದ 28) ಮಕ್ಕಳ ಹಕ್ಕುಗಳ ಒಡಂಬಡಿಕೆ ಹೇಳಿದೆ.

**ಕಾನೂನು:** ಭಾರತೀಯ ಪ್ರೌಢತೆ ಕಾಯಿದೆ [Indian Majority Act–1875]; ಹಿಂದೂ ದತ್ತು ಮತ್ತು ನಿರ್ವಹಣಾ ಕಾಯಿದೆ [Hindu Adoption and Maintenance Act–1956] ,ಹಿಂದೂ

ಅಪ್ರಾಪ್ತ ವಯಸ್ಕರು ಮತ್ತು ಪೋಷಕರ ಕಾಯಿದೆ [Hindu Minority and Guardianship Act –1956] ಮತ್ತು ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯಿದೆ [Juvenile Justice (Care and Protection of Children) Act –2015], ಗಣಿ ಕಾಯಿದೆ [Mines Act –1952], ಅನಾಥಾಲಯಗಳು ಮತ್ತು ಇತರ ಧರ್ಮಾಲಯಗಳ (ಮೇಲ್ವಿಚಾರಣೆ ಮತ್ತು ಹತೋಟಿ) ಕಾಯಿದೆ [The Orphanages and other Charitable Homes (Supervision and Control) Act – 1960] ಇವೆಲ್ಲವೂ 18 ವರ್ಷದೊಳಗಿವರನ್ನು 'ಮಗು' ಎಂದು ವ್ಯಾಖ್ಯಾನಿಸುತ್ತವೆ. ಹಿಂದೂ ವಿವಾಹ ಕಾಯಿದೆ [Hindu Marriage Act – 1955] 2006ರಲ್ಲಿ ತಿದ್ದುಪಡಿಯಾಗಿದೆ. ಹಾಗೂ ಬಾಲ್ಯ ವಿವಾಹ ನಿಷೇಧ ಕಾಯಿದೆ [The Prohibition of Child Marriage Act – 2006] 21 ವರ್ಷದೊಳಗಿನ ಗಂಡು ಹಾಗೂ 18 ವರ್ಷದೊಳಗಿನ ಹೆಣ್ಣು ಮಕ್ಕಳನ್ನು 'ಮಗು' ಎನ್ನುತ್ತದೆ



ಬಾಲ್ಯವಿವಾಹ ನಿಷೇಧ ಕಾಯಿದೆ 2006ಕ್ಕೆ ಕರ್ನಾಟಕ ಸರ್ಕಾರ ತಿದ್ದುಪಡಿ ಮಾಡಿ 'ಎಲ್ಲ ಬಾಲ್ಯವಿವಾಹಗಳು ಆರಂಭದಿಂದಲೇ ಅಸಿಂಧು' ಎಂಬ ವಿಶೇಷವಾದ ವ್ಯಾಖ್ಯಾನವನ್ನು ನೀಡಿದೆ. ಅಂದರೆ ಯಾರಾದರೂ 18 ವರ್ಷದೊಳಗಿನ ಹುಡುಗಿಯನ್ನು ಮದುವೆಯಾದರೆ ಅಥವಾ 21 ವರ್ಷದೊಳಗಿನ ಹುಡುಗನನ್ನು ಮದುವೆಯಾದರೆ ಅಂತಹ ವಿವಾಹಗಳಿಗೆ ಕಾನೂನಿನ ಪ್ರಕಾರ ಮಾನ್ಯತೆ ಇರುವುದಿಲ್ಲ. ಈ ಮಧ್ಯೆ ವೈಯಕ್ತಿಕ ಕಾಯಿದೆಯನ್ನು ಮುಂದಿಟ್ಟು, ವಯಸ್ಸಿಗೆ ಬಂದ ಬಾಲಕಿಯರಿಗೆ (18ರೊಳಗೆ) ಮದುವೆ ಮಾಡುವ ಹಕ್ಕನ್ನು ಕೆಲವು ಕುಟುಂಬಗಳು ಪ್ರತಿಪಾದಿಸಿದ್ದವು.

ಆದರೆ, ನ್ಯಾಯಮೂರ್ತಿ ಹಿಂಚಗೇರಿಯವರು ಕೊಪ್ಪಳದ ಒಂದು ಪ್ರಕರಣವನ್ನು ಇತ್ಯರ್ಥಗೊಳಿಸಿ, 'ಬಾಲ್ಯವಿವಾಹ ನಿಷೇಧ ಕಾಯಿದೆ 2006 ಒಂದು ಸಾರ್ವತ್ರಿಕ ಕಾಯಿದೆ ಮತ್ತು ಅದು ಎಲ್ಲರಿಗೂ ಅನ್ವಯಿಸುತ್ತದೆ' ಎಂದು ನಿರ್ದೇಶಿಸಿದ್ದಾರೆ.



ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ 1993ಕ್ಕೆ ಇತ್ತೀಚೆಗೆ 2015ರಲ್ಲಿ ತಿದ್ದುಪಡಿಯಾಗಿದ್ದು, ಅದನ್ನು 'ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ಕಾಯಿದೆ 1993' ಎಂದು ಹೆಸರಿಸಲಾಗಿದೆ. ಈ ಕಾಯಿದೆಯಲ್ಲಿ ಈಗ ಸೆ. 2ರಡಿಯಲ್ಲಿನ ಅರ್ಥ ವಿವರಣೆಯಲ್ಲಿ 42(ಬಿ) ಎಂಬ ಸೇರ್ಪಡೆಯಾಗಿ, ಸಮಾಜದ ದುರ್ಬಲ ವರ್ಗಗಳು ಎಂಬ ಪದದೆದುರು, ಮಕ್ಕಳು, ಹದಿವಯಸ್ಕರು, ಮಹಿಳೆಯರು, ವೃದ್ಧರು, ಅಂಗವಿಕಲರು ಮತ್ತು ರೋಗಿಗಳು ಇತ್ಯಾದಿಗಳನ್ನು ಹೆಸರಿಸಿದ್ದಾರೆ. ಜೊತೆಗೆ, ವಾರ್ಡ್ ಸಭಾ ಮತ್ತು ಗ್ರಾಮಸಭಾ ವಿವರಿಸುವ ಅಧ್ಯಾಯ 2ರ ಸೆ. 3 (ಎಚ್)ನಲ್ಲಿ ಗ್ರಾಮ ಸಭೆಯ ವಿಶೇಷ ಸಭೆಗಳು ಎಂಬುದರಲ್ಲಿ, 2(1)ರಲ್ಲಿ ಗ್ರಾಮದ ಮಕ್ಕಳನ್ನು ಕುರಿತು ಚರ್ಚಿಸಲು ವಿಶೇಷ ಗ್ರಾಮಸಭೆಗಳನ್ನು ಕನಿಷ್ಟ ವರ್ಷಕ್ಕೊಮ್ಮೆ ನಡೆಸಬೇಕೆಂದು ಸೂಚಿಸಲಾಗಿದೆ.

> “ಮಕ್ಕಳೇ ಮನೆಯ ಮಾಣಿಕ್ಯ, ಮಕ್ಕಳೇ ದೇಶದ ಸಂಪತ್ತು ಎಂಬ ಮಾತುಗಳನ್ನು ಕೇಳುತ್ತಾ ಬರುತ್ತಿದ್ದೇವೆ. ಆದರೆ ಎಲ್ಲಾ ಮಕ್ಕಳನ್ನು ದೇಶದ ಆಸ್ತಿಯನ್ನಾಗಿ ಬೆಳೆಸುವ ಜವಾಬ್ದಾರಿಯನ್ನು ತಂದೆ, ತಾಯಿ, ಶಿಕ್ಷಕ ಮತ್ತು ಸಮಾಜ ತೆಗೆದುಕೊಳ್ಳಬೇಕು. ಮಕ್ಕಳಿಗೆ ತಮ್ಮ ಪ್ರತಿಭೆಗಳನ್ನು ಬೆಳಸಿಕೊಳ್ಳಲು ಸಮಾನ ಅವಕಾಶ ನೀಡಬೇಕು. ಮಕ್ಕಳನ್ನು ದೇಶದ ಆಸ್ತಿ ಎಂದು ಪ್ರತಿಬಿಂಬಿಸುವ ನಾವು ಮಕ್ಕಳ ಹಕ್ಕುಗಳ ಬಗ್ಗೆ ಹೆಚ್ಚಿನ ಒತ್ತು ನೀಡಬೇಕು. ಮಕ್ಕಳಿಗೆ ಆಸ್ತಿ ಮಾಡುವ ಪೋಷಕರಿಗಿಂತ ಮಕ್ಕಳನ್ನು ಆಸ್ತಿಯನ್ನಾಗಿ ಬೆಳಸುವ ಪೋಷಕರನ್ನು ದೇಶ ಬೆಂಬಲಿಸಬೇಕು. ಒಟ್ಟಾರೆಯಾಗಿ ಹೇಳುವುದಾದರೆ ಮಕ್ಕಳ ಹಕ್ಕುಗಳನ್ನು ರಕ್ಷಣೆ ಮಾಡುವುದು, ಮಕ್ಕಳ ಮೇಲಿನ ದೌರ್ಜನ್ಯವನ್ನು ತಡೆಯುವುದು ಹಾಗೂ ಅವರ ಪಾಲನೆ ಪೋಷಣೆ ಮಾಡುವುದು ಪ್ರತಿಯೊಂದು ದೇಶದ ಜವಾಬ್ದಾರಿಯಾಗಿದೆ.”